**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು-ಮಡಿಕೇರಿ**

**ಎಸ್.ಸಿ ಸಂಖ್ಯೆ: 15/2025**

ಪ್ರಾಸಾಃ 8
ಚಾಸಾಃ10

| | | |
|---|---|---|
| ಸಾಕ್ಷಿದಾರರ ಹೆಸರು | : | ಚಂದ್ರಾವತಿ |
| ಗಂಡನ ಹೆಸರು | : | ಶಿವಕುಮಾರ್ ಎಸ್.ಆರ್ |
| ವಯಸ್ಸು | : | 45 ವರ್ಷ |
| ವೃತ್ತಿ | : | ಕೂಲಿ ಕೆಲಸ |
| ವಾಸ | : | ಶಾಂತಳ್ಳಿ ಗ್ರಾಮ |

**ಸಾಕ್ಷಿಯನ್ನು ದಿನಾಂಕ 06-03-2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ನ್ಯಾಯಾಲಯದಲ್ಲ ವಿಸಿ ಮೂಲಕ ಹಾಜರು ಪಡಿಸಲಾದ ವ್ಯಕ್ತಿ ಈ ಪ್ರಕರಣದ ಆರೋಪಿ ಸುರೇಶ್, ಆತ ನನ್ನ ದೂರದ ಸಂಬಂಧಿ ಮತ್ತು ನಮ್ಮ ಊರಿನವರು. ಅವರು ಶಾಂತಳ್ಳಿಯಲ್ಲಿ ತನ್ನ ತಾಯಿಯಾದ ಮೃತ ಕಾವೇರಿಯೊಂದಿಗೆ ವಾಸಿಸುತ್ತಿದ್ದನು, ಇಬ್ಬರು ಕೂಲಿ ಕೆಲಸ ಮಾಡುತ್ತಿದ್ದರು. ಮೃತ ಕಾವೇರಿ ನನ್ನೊಂದಿಗೆ ಕೂಲಿ ಕೆಲಸಕ್ಕಾಗಿ ಬರುತ್ತಿದ್ದರು. ಮೃತ ಕಾವೇರಿಯವರ ಗಂಡ ಸುಬ್ಬಯ್ಯ ಆತ ಸರ್ವೇ ಇಲಾಖೆಯಲ್ಲಿ ಕರ್ತವ್ಯ ಮಾಡಿ ಅವರ ಮರಣದ ನಂತರ ಅವರ ಪಿಂಚಣಿ ಹಣ ಅವರ ಹೆಂಡತಿಯಾದ ಮೃತ ಕಾವೇರಿಗೆ ಬರುತ್ತಿತ್ತು. ಸುರೇಶ್ ರವರ ಮನೆಯಿಂದ ಸ್ವಲ್ಪ ದೂರದಲ್ಲಿ ನಮ್ಮ ಮನೆ ಇದ್ದು, ಅವರ ಮನೆಯಲ್ಲಿ ಗಲಾಟೆಯಾದಾಗ ನನಗೆ ಗೊತ್ತಾಗುತ್ತಿರಲಿಲ್ಲ. ಅವರಿಬ್ಬರ ಒಡನಾಟ

ಚೆನ್ನಾಗಿಯೇ ಇತ್ತು. ಸುಮಾರು 2 ವರ್ಷಗಳ ಹಿಂದೆ ಕಾವೇರಿ ಮೃತಳಾಗಿರುತ್ತಾಳೆ, ಯಾವ ಕಾರಣಕ್ಕೆ ಕಾವೇರಿ ಮೃತಳಾಗಿದ್ದಳು ಎಂದು ನನಗೆ ಗೊತ್ತಿಲ್ಲ, ಆ ಸಂದರ್ಭ ನಾನು ನನ್ನ ಸಂಬಂಧಿಕರ ಮನೆಗೆ ಹೋಗಿದ್ದೆ. ಮೃತ ಕಾವೇರಿ ಕೂಲಿ ಕೆಲಸಕ್ಕೆಂದು ನನ್ನ ಜೊತೆ ಬಂದಾಗ ಆಕೆಯ ಮತ್ತು ಆರೋಪಿಯ ನಡುವೆ ಪಿಂಚಣಿ ಹಣದ ವಿಚಾರವಾಗಿ ಗಲಾಟೆ ಆಗುತ್ತಿದ್ದ ಬಗ್ಗೆ ನನ್ನೊಡನೆ ಚರ್ಚಿಸಿಲ್ಲ, ಆದ್ದರಿಂದ ಆ ವಿಚಾರ ನನಗೆ ಗೊತ್ತಿಲ್ಲ. ಈ ಪ್ರಕರಣದ ಸಂಗತಿಗಳು ನನಗೆ ಗೊತ್ತಿಲ್ಲ, ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ, ನಾನು ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ಪೊಲೀಸರ ಮುಂದೆ ನೀಡಿದ ಹೇಳಿಕೆ ಮತ್ತು ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಗಿದೆ).**

**ಪಾಟೀಸವಾಲು- ಸರ್ಕಾರಿ ಅಭಿಯೋಜಕರಿಂದಃ**

2. ಸುಬ್ಬಯ್ಯನವರ ಪಿಂಚಣಿ ಹಣದ ವಿಚಾರವಾಗಿ ಕಾವೇರಮ್ಮನಿಗೂ ಮತ್ತು ಆರೋಪಿಗೂ ಆಗಾಗ ಜಗಳ, ಗಲಾಟೆ ಆಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಕಾರಣಕ್ಕಾಗಿ ದಿಃ 31-05-2024 ರಂದು ರಾತ್ರಿ ಆರೋಪಿ ಕಾವೇರಿಯವರನ್ನು ಕೋಲಿನಿಂದ ಹೊಡೆದು ಕೊಲೆಗೈದಿರುತ್ತಾನೆ ಎಂಬ ವಿಚಾರ ನನಗೆ ಗೊತ್ತಿದ್ದರು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯವರ ಮುಂದೆ ಈಗ ನನಗೆ ಓದಿ ಹೇಳಿದಂತೆ ಅಂದರೆ "ಮೃತ ಪಟ್ಟ ನಂತರ ಸುಬ್ಬಯ್ಯ ರವರ -------------------ಎಂಬುದಾಗಿ ನೀಡಿದ ಹೇಳಿಕೆ" ಎಂದು ಹೇಳಿಕೆಯನ್ನು ನೀಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಸಾಕ್ಷಿಯ

ಹೇಳಿಕೆಯ ನಿರ್ದಿಷ್ಟ ಭಾಗವನ್ನು ನಿಪಿ-14ಎಂದು ಗುರುತಿಸಲಾಯಿತು. ಆರೋಪಿ ನನ್ನ ದೂರದ ಸಂಬಂಧಿ ಮತ್ತು ನಮ್ಮ ಊರಿನವರಾದ ಕಾರಣ ಆತನನ್ನು ಶಿಕ್ಷೆಯಿಂದ ತಪ್ಪಿಸಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು- ಆರೋಪಿ ಪರ ಶ್ರೀ. ಎಂ.ಬಿ.ಎಸ್ ವಕೀಲರಿಂದಃ**

ಇರುವುದಿಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.